ದಾವಣಗೆರೆ ನಗರದ ಈಜುಕೊಳದ ಬಗ್ಗೆ

೪೨೮ ಶ್ರೀ ವೈ.ಎಂ. ವೀರಣ್ಣ(ದಾವಣಗೆರೆ)–ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರಂ. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

(ಅ) ದಾವಣಗೆರೆ ನಗರ ಸಭಾ ಈಜುಕೊಳ ನಾಲ್ಕು ವರ್ಷಗಳಿಂದ ದುರಸ್ತಿಯಾಗಿಲ್ಲದಿರುವುದು ಮತ್ತು ಕ್ರೀಡಾಂಗಣ ಪ್ರಾರಂಭವಾಗಿ ಎರಡು ದಶಕಗಳೇ ಕಳೆದಿದ್ದರು ಪೂರ್ಣಗೊಂಡಿಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಬಂದಿದ್ದರೆ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

(ಅ) ಹೌದು

(ಆ) ಈಜು ಕೊಳದ ಬಗ್ಗೆ ದಾವಣಗೆರೆ ನಗರದ ಎಂಸಿಸಿ ಬಿ ಬ್ಲಾಕಿನಲ್ಲಿ ನಗರ ಸಭೆಗೆ ಸೇರಿದ ಅಂತರ ರಾಷ್ಟ್ರೀಯ ಮಟ್ಟದ ಒಂದು ಈಜು ಕೊಳವಿದ್ದು ಈ ಈಜು ಕೊಳವನ್ನು ೧೯೮೪ರಲ್ಲಿ ಕೆಲವು ರಿಪೇರಿಗಳನ್ನು ಮಾಡಿಸಿ, ಜನರ ಉಪಯೋಗಕ್ಕಾಗಿ ಬದಲಿಸಲಾಗಿತ್ತು. ಆದರೆ ಈಜು ಕೊಳದ ದಕ್ಷಿಣ ಮತ್ತು ಪಶ್ಚಿಮ ಭಾಗದ ರೋಡ್‌ಗಳಲ್ಲಿ ಮತ್ತು ತಳಭಾಗದಲ್ಲಿ ನೀರು ಸೋರಿ ಹೋಗುವುದು ಕಂಡು ಬಂದಿದ್ದರಿಂದ ಅದನ್ನು ರಿಪೇರಿಗೊಸ್ಕರ ನಿಲ್ಲಿಸಲಾಗಿದೆ ಈಜು ಕೊಳದ ರಿಪೇರಿಗಾಗಿ ಪ್ರಖ್ಯಾತ ಇಂಜನೀಯರರವರಿಂದ ಸ್ಥಳ ತನಿಖೆ ಮಾಡಿಸಿ, ರಿಪೇರಿಗಳನ್ನು ಮಾಡಿಸಲು ಡಿಸೈನುಗಳನ್ನು ಪಡೆಯಲು ಕ್ರಮ ಕೈಗೊಳ್ಳಲಾಗಿದೆ ಮತ್ತು ಈ ಕೆಲಸಕ್ಕಾಗಿ ೧೯೯೦–೯೧ನೇ ಸಾಲಿನ ಆಯವ್ಯಯದಲ್ಲಿ ೪ ಲಕ್ಷ ರೂಪಾಯಿಗಳನ್ನು ಪ್ರಸ್ತಾಪಿಸಲಾಗಿದೆ. ರಿಪೇರಿಗೆ ಸಂಬಂಧಿಸಿದಂತೆ ಡಿಸೈನುಗಳನ್ನು ಪಡೆದ ನಂತರ, ಅದರಂತೆ ಅಂದಾಜು ತಯಾರಿಸಿ, ಮಂಜೂರಾತಿ ಪಡೆದು ರಿಪೇರಿ ಕೆಲಸಗಳನ್ನು ಮಾಡಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು.

ಇ) ಕ್ರೀಡಾಂಗಣದ ಬಗ್ಗೆ.—ಕ್ರೀಡಾಂಗಣವು ೮ ಲಕ್ಷ ರೂಪಾಯಿಗಳ ಮೆಚ್ಚಿದ ಅಂದಾಜಿನಲ್ಲಿ ತಯಾರಾಗಿದ್ದು ಅದರ ಪೈಕಿ ೪,೮೯,೮೧೦.೦೦ ರೂಗಳನ್ನು ಈಗಾಗಲೇ ಖರ್ಚು ಮಾಡಲಾಗಿದೆ. ಇದರ ಪೈಕಿ ಈಗಾಗಲೇ ಸರ್ಕಾರವು ನಗರ ಸಭೆಗೆ ೧ ಲಕ್ಷವನ್ನು ಕೊಟ್ಟಿರುತ್ತದೆ. ಪುನಃ ೨ ಲಕ್ಷರೂಗಳ ಅನುದಾನವು ಸರ್ಕಾರದಿಂದ ಬಿಡುಗಡೆಯಾಗಿ ನಗರ ಸಭೆಗೆ ಸದರೀ ಹಣ ಪಾವತಿಯಾದ ಕೂಡಲೇ ಮುಂದಿನ ಕಾರ್ಯಗಳನ್ನು ಪ್ರಾರಂಭಿಸಲಾಗುವುದು.

ಆಡಳಿತ ಭಾಷೆ ಕನ್ನಡ ಜಾರಿಗೊಳಿಸಂವ ಬಗ್ಗೆ

೪೮೬ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಆಡಳಿತ ಭಾಷೆಯಾಗಿ ಕನ್ನಡವನ್ನು ಸಮರ್ಪಕವಾಗಿ ಜಾರಿಗೊಳಿಸಲು ಸರ್ಕಾರವು ನಿರ್ಧರಿಸಿದೆಯೇ;

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು)—

ಅ) ಹೌದು.

ಆ) ಕರ್ನಾಟಕ ರಾಜ್ಯ ಭಾಷಾ ಅಧಿನಿಯಮ ೧೯೮೩ ರ ಪ್ರಕಾರ ಕನ್ನಡವು ರಾಜ್ಯದ ಆಡಳಿತ ಭಾಷೆ. ಅಧಿನಿಯಮದ ಪ್ರಕಾರ ಕನ್ನಡವನ್ನು ಆಡಳಿತ ಭಾಷೆಯಾಗಿ ಸಮರ್ಪಕವಾಗಿ ಜಾರಿಗೊಳಿಸಲು ಅವಶ್ಯಕವಾದ ಹಲವಾರು ಅಧಿಸೂಚನೆಗಳು, ಆದೇಶಗಳು ಮತ್ತು ಸುತ್ತೋಲೆಗಳನ್ನು ಕಾಲಕಾಲಕ್ಕೆ ಹೊರಡಿಸಲಾಗಿದೆ.

ಇಂಗ್ಲೀಷ್ ಬೆರಳಚ್ಚು ಯಂತ್ರಗಳ ಬದಲಿಗೆ ಕನ್ನಡ ಬೆರಳಚ್ಚು ಯಂತ್ರಗಳ ಸರಬರಾಜು ಆಡಳಿತಕ್ಕಾಗಿ ಕೈಪಿಡಿಗಳು ಮುಂತಾದ ಪೂರಕ ಸಾಹಿತ್ಯದ ರಚನೆ, ಪರಿಷ್ಕಾರ ಮತ್ತು ಪೂರೈಕೆ ಕಛೇರಿಗಳಲ್ಲಿ ಕನ್ನಡ ಬಳಕೆ ಪ್ರಗತಿಯ ಬಗ್ಗೆ ಮಾನಸಿಕ ಸಮೀಕ್ಷೆ. ತನಿಖಾ ಕಾರ್ಯಕ್ರಮ ಕನ್ನಡ ಬೆರಳಚ್ಚು. ಶೀಘ್ರಲಿಪಿ ತರಬೇತಿ, ಆಡಳಿತ ಕನ್ನಡ ಕಾರ್ಯ ಶಿಬಿರಗಳನ್ನು ನಡೆಸುವುದು ಮುಂತಾದ ಕ್ರಮಗಳನ್ನು ಕೈಗೊಂಡಿದೆ.